**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ- ನ್ಯಾಯಾಲಯ ರೋಣ**

**ಸಿ.ಸಿ .ನಂ.:802/2019**
ಪಿ.ಡಬ್ಲೂ :4
ಸಿ.ಡಬ್ಲೂ. :4

ಸಾಕ್ಷಿದಾರರ ಹೆಸರು :ದೇವರಾಜ ತಂದೆ ಶಿವಪ್ಪ ಚವಾಣ

ವಯಸ್ಸು : 27 ವರ್ಷ

ಉದ್ಯೋಗ : ಒಕ್ಕಲುತನ

ವಾಸ ಸ್ಥಳ : ಗಜೇಂದ್ರಗಡ

(ಈ ದಿವಸ ದಿನಾಂಕ 24-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ:**

ಸಾಕ್ಷಿಯು ಆರೋಪಿತರು ಹೇಳಿ ತೋರಿಸಿದ ಗುನ್ನಾ ಜಾಗೆಯ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ನಿ.ಪಿ.4 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.4 ಎ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸನ್ 2018 ರಲ್ಲಿ ರಾತ್ರಿ ವೇಳೆ ಸಾರಾಯಿ ಅಂಗಡಿಯಲ್ಲಿ ಮತ್ತು ಬೆಂಗಾಲ ಸ್ಟೋರ್ಸ್ ಕಳ್ಳತನವಾದ ಕುರಿತು ಇಬ್ಬರು ವ್ಯಕ್ತಿಗಳನ್ನು ಪೊಲೀಸರು ಕರೆದುಕೊಂಡು ಬಂದು ಸದರಿ ವ್ಯಕ್ತಿಗಳು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿದ್ದರಿಂದ ಅದಕ್ಕೆ ಸಹಿ ಮಾಡಿರುತ್ತೇನೆ. ನನ್ನ ಜೊತೆ ಇನ್ನೊಬ್ಬರು ಯಾರು ಸಹಿ ಮಾಡಿದರು ಎಂದು ಅವರ ಹೆಸರು ನೆನಪಿಲ್ಲ. ಪೊಲೀಸರು ಸ್ಥಳದಲ್ಲಿ ಪೋಟೋ ತೆಗೆದರು. ಸಾಕ್ಷಿಯು ಆರೋಪಿತರು ಹೇಳಿ ತೋರಿಸಿದ ಜಾಗೆಯ ಪಂಚನಾಮೆಯ ಕಾಲಕ್ಕೆ ತೆಗೆದ ಪೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.5 ಎಂದು ಗುರುತಿಸಲಾಯಿತು. ಬಹಳ ದಿನಗಳ ಆಗಿದ್ದರಿಂದ ಆರೋಪಿತರನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

**ಪಾಟೀ ಸವಾಲು ಆರೋಪಿತನ ಪರ ವಕೀಲರಿಂದಃ**

ಪಂಚನಾಮೆ ಯಾರು ಬರೆದರು ಎಂದು ನನಗೆ ಹೇಳಲು ಬರುವುದಿಲ್ಲ. ಕಳ್ಳತನ ಮಾಡಿದ ಸ್ಥಳವನ್ನು ಕಳ್ಳರು ತೋರಿಸಿರುತ್ತಾರೆ. ಪೊಲೀಸರು ಹೇಳಿದ ಮೇರೆಗೆ ಅವರಿಗೆ

ಅನುಕೂಲವಾಗಲಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಮಃ 2.00 ರಿಂದ 03.00 ಗಂಟೆ ಸುಮಾರಿಗೆ ಮಾಡಿರುತ್ತಾರೆ. ದಿನಾಂಕ ನೆನಪಿಲ್ಲ. 10 ನೇ ತರಗತಿಯವರಗೆ ಶಾಲೆ ಕಲಿತ್ತಿದ್ದೇನೆ. ಪಂಚನಾಮೆಯನ್ನು ನಾನು ಓದಿಲ್ಲ. ಪಂಚನಾಮೆಯಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ಏನು ಘಟನೆಯಾಗಿದೆ ಎಂದು ಹೇಳಲು ಬರುವುದಿಲ್ಲ. ಪೊಲೀಸರು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಘಟನೆಯ ಬಗ್ಗೆ ವ್ಯಯಕ್ತಿಕ ಮಾಹಿತಿ ಇಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ ಹೆ ಕೆ ಸರಿ ಇದೆ**

(ಹುಲುಗಪ್ಪ ಡಿ.)
ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.

**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ- ನ್ಯಾಯಾಲಯ ರೋಣ**

**ಸಿ.ಸಿ .ನಂ.:802/2019**
ಪಿ.ಡಬ್ಲೂ :3
ಸಿ.ಡಬ್ಲೂ. :1

| | | |
|---|---|---|
| ಸಾಕ್ಷಿದಾರರ ಹೆಸರು | :ಮಂಜನಾಥ ತಂದೆ ಕಳಕಪ್ಪ ಬಿನ್ನಾಳ |
| ವಯಸ್ಸು | : 46 ವರ್ಷ |
| ಉದ್ಯೋಗ | : ವೈನ್ ಶಾಪ್ ನಲ್ಲಿ ಕೆಲಸ |
| ವಾಸ ಸ್ಥಳ | : ಮಲ್ಕ ಸಮುದ್ರ |

(ಈ ದಿವಸ ದಿನಾಂಕ 24-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ:**

ನಾನು ಮೊದಲು ಸನ್ 2014 ರಿಂದ 2021 ರವರೆಗೆ ಕಾಲಕಾಲೇಶ್ವರ ಸರ್ಕಲ್ ಹತ್ತಿರ ಭೂಮರೆಡ್ಡಿ ಕಾಂಪ್ಲೆಕ್ಸ ನಲ್ಲಿ ಇದ್ದ ಕಾಲಕಾಲೇಶ್ವರ ಫ್ರೆಂಡ್ಸ ಅಸೋಸಿಯೇಷನ್ ಕ್ಲಬ್ ನಲ್ಲಿ ಮ್ಯಾನೇಜರ್ ಎಂದು ಕೆಲಸ ಮಾಡುತ್ತಿದ್ದೆ. ಸದರಿ ಕ್ಲಬ್ ನಲ್ಲಿ ಸನ್ 2018 ರಲ್ಲಿ ಕಳ್ಳತನವಾಗಿತ್ತು. ಪ್ರತಿದಿನ ಸದರಿ ಕ್ಲಬ್ ಅನ್ನು ಬೆಳಿಗ್ಗೆ 09.00 ಗಂಟೆಗೆ ತೆರೆದು ರಾತ್ರಿ 11.00 ಗಂಟೆಗೆ ಮುಚ್ಚುತ್ತಿದ್ದೇವು. ದಿಃ31.07.2018 ರಂದು ರಾತ್ರಿ 11.00 ಗಂಟೆಗೆ ಸದರಿ ಕ್ಲಬ್ ನ ಬಾಗಿಲು ಹಾಕಿಕೊಂಡು ಹೋಗಿರುತ್ತೇನೆ. ಅದೇ ದಿನ ರಾತ್ರಿ 02.30 ಗಂಟೆ ಸುಮಾರಿಗೆ ಗಜಾನನ ಕಬಾಡಿ ರವರು ನನಗೆ ಫೋನ್ ಮಾಡಿ ನಮ್ಮ ಅಂಗಡಿ ಮತ್ತು ನಿಮ್ಮ ಅಂಗಡಿ ಕಳುವಾಗಿದೆ ಬಾ ಎಂದು ಹೇಳಿರುತ್ತಾರೆ. ನಾನು 5 ನಿಮಿಷದಲ್ಲಿ ಅಲ್ಲಿಗೆ ಹೋಗಿರುತ್ತೇನೆ. ನಮ್ಮ ಮತ್ತು ಅವರ ಸೆಟ್ರಸ್ ಅಂದಾಜು 3 ಅಡಿಯಷ್ಟು ಎತ್ತಿದ್ದರು. ನಮ್ಮ ಅಂಗಡಿಯಲ್ಲಿ ಕಳ್ಳತನ ಆಗಿರಲಿಲ್ಲ. ನಮ್ಮ ಅಂಗಡಿಯ ಗಲ್ಲಾಪಟ್ಟಿಗೆ ತೆಗೆದಿದ್ದರು. ಕಳ್ಳತನ ಮಾಡಲು ಪ್ರಯತ್ನಿಸಿರುತ್ತಾರೆ. ನಂತರ ನಾನು ಮಾಲಕರಿಗೆ ಹೇಳಿರುತ್ತೇನೆ. ಪೊಲೀಸರು ಸಹ ಇದ್ದರು. ನಾನು ದೂರು ನೀಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2 ಎ ಎಂದು ಗುರುತಿಸಲಾಯಿತು. ಪೊಲೀಸರು ಪುನಃ ಬೆಳಿಗ್ಗೆ ಅಂಗಡಿಗೆ ಬಂದು ಪರಿಶೀಲನೆ ಮಾಡಿರುತ್ತಾರೆ. ನಾನೇ ಪೊಲೀಸರಿಗೆ ಜಾಗೆಯನ್ನು ತೋರಿಸಿರುತ್ತೇನೆ. ನಂತರ ಕಳ್ಳರ ಬಗ್ಗೆ ಮಾಹಿತಿ ಗೊತ್ತಾಗಿರುವುದಿಲ್ಲ. ಪೊಲೀಸರು ಕಳ್ಳರು ಯಾರು ಎಂದು ಹೇಳಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು).

**ಪಾಟೀ ಸವಾಲು ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ:**

ದಿಃ 01.08.2018 ರಂದು ಕಳ್ಳತನ ಮಾಡಿದ ಬಗ್ಗೆ ವಿಚಾರಣೆ ಕಾಲಕ್ಕೆ ಆರೋಪಿತರು ಕಳ್ಳತನ ಮಾಡಿದ ಬಗ್ಗೆ ಒಪ್ಪಿ ಕೊಂಡಿದ್ದು ವಿಚಾರಣೆ ಕುರಿತು ನನ್ನನ್ನು ಠಾಣೆಗ ಕರೆಯಿಸಿದರು ಎಂದರೆ ಸರಿಯಲ್ಲ. ಅಲ್ಲಿ ವೆಂಕಟೇಶ ತಂದೆ ವೆಂಕಟರಾಮು, ಚಕ್ರವರ್ತಿ ಚಕ್ಕರಿ ಬಸವನಾಯಕ ಹಾಗೂ ಇನ್ನಿಬ್ಬರು ಕೂಡಿಕೊಂಡು ಗಜೇಂದ್ರಗಡ ಪಟ್ಟಣದ ರಸ್ತೆಗೆ ಹೊಂದಿರುವ ಎಸ್.ಬಿ.ಐ ಬ್ಯಾಂಕ್ ಹತ್ತಿರ ಇರುವ ಫ್ರೆಂಡ್ಸ ಅಸೋಸಿಯೇಷನ್ ಬಾರ್ ದಲ್ಲಿ ಕಳುವು ಮಾಡಲು ಸೆಟ್ರಸ್ ತೆರೆಯತ್ತಿದ್ದಾಗ ಶಬ್ದ ಕೇಳಿ ಪೊಲೀಸರು ಬರುವುದನ್ನು ನೋಡಿ ನಾವೆಲ್ಲರೂ ಕಳುವು ಮಾಡುವುದನ್ನು ಬಿಟ್ಟು ಓಡಿಹೋಗಿದ್ದು ಇರುತ್ತದೆ ಎಂದು ನಮ್ಮ ಸಮಕ್ಷಮ ತಿಳಿಸಿದ್ದು, ಸದರಿ ಬಾರ್ ನಲ್ಲಿ ಕಳ್ಳತನ ಮಾಡಲು ಪ್ರಯತ್ನ ಮಾಡಿದೇವು ಎಂದು ಒಪ್ಪಿ ಕೊಂಡಿದ್ದು ಆ

ಕುರಿತು ಈಗ ಓದಿ ಹೇಳಿದಂತೆ ಪೊಲೀಸರಿಗೆ ದಿಃ 30.01.2019 ರಂದು ನಾನು ಪುನಃ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿ ಒಪ್ಪದ ಪುನಃ ಹೇಳಿಕೆಯನ್ನು ನಿ.ಪಿ.3 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿತನ ಪರ ವಕೀಲರಿಂದಃ**

ನಮ್ಮ ಮಾಲೀಕ ದೂರನ್ನು ಬರೆಸಿದ್ದು ದೂರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಘಟನೆ ನಡೆಯದಿದ್ದರು ಮಾಲೀಕರು ಹೇಳಿದ್ದರಿಂದ ದೂರಿಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ. ಪ್ರಕರಣದ ವ್ಯಯಕ್ತಿಕ ಮಾಹಿತಿ ಇಲ್ಲ. ಮಾಲೀಕರು ಮತ್ತು ಪೊಲೀಸರಿಗೆ ಹೇಳಿದ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ ಹೆ ಕೆ ಸರಿ ಇದೆ**

(ಹುಲುಗಪ್ಪ ಡಿ.)
ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.